ಶ್ರೀ ವೀರೇಂದ್ರ ಪಾಟೀಲ್.—ಅರೀತಿ ಇರುವುದು ಅಫಿಷಿಯರ್ಸ್‌ಗೆ ಗೊತ್ತಾಗಲಿಲ್ಲ. ಈ ಪ್ಯಾಜೆಕ್ಟ್‌ನ ವರದಿಯ ಬಗ್ಗೆ ಮದ್ರಾಸ್ ಸರ್ಕಾರದವರು ಏನೋ ಕೆಲವು ತಕರಾರುಗಳನ್ನು ಹಾಕಿದ್ದಾರೆ, ಕೆಲವು ಅಬ್‌ಸರಾವೇಷನ್ಸ್ ಮಾಡಿದ್ದಾರೆ. ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್ನಿಗೂ ಬರೆದಿದ್ದಾರೆ. ನಮಗೆ ಅಫಿಷಿಯರ್ಸ್‌ಗೆ ಗೊತ್ತಾಗಲಿಲ್ಲ.

Pay Scales of Junior Engineers of Mysore State Public Works Department

*Q.—91. Sri H. R. KESHAVA MURTHY (Gandasi).—

Will the Minister for Public Works be pleased to state:—

(*a*) whether it is a fact that the Junior Engineers of Mysore State Public Works Department are demanding better pay scales and service conditions since a long time;

(*b*) whether Government are aware that the Junior Engineers are not satisfied with the pay scales announced recently by Government;

(*c*) whether the pay scales of Junior Engineers were superior to all the other technical cadres including Medical Graduates up to 1961;

(*d*) if so, what action Government has taken or propose to take to give better pay scales to the Junior Engineers and to improve their service conditions?

A.—Sri VEERENDRA PATIL (Minister for Public Works).—

(*a*) Yes.
(*b*) Yes.
(*c*) Yes.
(*d*) Government is examining the question.

ಶ್ರೀ ಎಚ್. ಆರ್. ಕೇಶವಮೂರ್ತಿ.—ಜೂನಿಯರ್ ಇಂಜಿನಿಯರುಗಳು ಬಹಳ ವರ್ಷಗಳಿಂದಲೂ ಕೂಡ ತಮ್ಮ ಸ್ಥಿತಿಗತಿಗಳನ್ನು ಸರಕಾರದಲ್ಲಿ ನಿವೇದನೆಮಾಡುತ್ತಿದ್ದಾರೆ. ಎಷ್ಟೋ ಇಂಜಿನಿಯರುಗಳು ಪ್ರತಿಭಾವಂತರು ಇದ್ದಾರೆ. ಅವರಲ್ಲಿ ಕೆಲವರು ಹತ್ತಾರು ವರ್ಷಗಳಿಂದ ಜೂನಿಯರ್ ಇಂಜಿನಿಯರುಗಳಾಗಿಯೇ ಇದ್ದಾರೆ. ಕೆಲವರನ್ನು ಸೂಪರಿಂಟೆಂಡಿಂಗ್ ಇಂಜಿನಿಯರುಗಳನ್ನಾಗಿಯೇ ಹಾಕಿದ್ದಾರೆ ಈ ವಿಷಯದಲ್ಲಿ ಸರ್ಕಾರದವರು ಸಮಗ್ರವಾದ ತೀರ್ಮಾನವನು ಕೊಡುತ್ತಾರೆಯೇ?

† ಶ್ರೀ ವೀರೇಂದ್ರ ಪಾಟೀಲ್.—ಈ ಪ್ರಶ್ನೆಗೆ ಮೊದಲೇ 18-10-66ರಲ್ಲಿ ಉತ್ತರ ಕೊಟ್ಟಿತ್ತು. ಇದಾದಮೇಲೆ ಮೊನ್ನೆಮೊನ್ನೆ ಮತ್ತೆ ಜೂನಿಯರ್ ಇಂಜಿನಿಯರುಗಳ ಸಂಬಳ ಸಾರಿಗೆಗಳನ್ನು ಉತ್ತಮಪಡಿಸುವುದಕ್ಕೆ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಹಿಂದಿನ ನಿರ್ಣಯದ ಪ್ರಕಾರ ಅವರ ಸಂಬಳ ಸಾರಿಗೆ 225 ರಿಂದ 375ರ ವರೆಗೆ ಇತ್ತು. ಈಗ ಹೊಸ ನಿರ್ಣಯದ ಪ್ರಕಾರ 250ರಿಂದ 400ವರೆಗೆ ಮಾಡಿದ್ದೇವೆ. ಕೇಂದ್ರ ಮತ್ತು ಆಂಧ್ರ ಪ್ರದೇಶದಲ್ಲಿ ಅವರಿಗೆ ಏನು ಸಂಬಳ ಸಾರಿಗೆ ಇದೆಯೋ ಅದೇ ಸಂಬಳ ಸಾರಿಗೆಯನ್ನು ಅಡಾಪ್ಟ್ ಮಾಡಿಕೊಂಡು ಬಂದಿದ್ದೇವೆ. ಇವತ್ತಿನ ದಿವಸ ಮದ್ರಾಸ್‌ನಲ್ಲಿ ಮತ್ತು ಕೇರಳದಲ್ಲಿ ಏನು ಸಿಕ್ಕುತ್ತಿದೆಯೋ ಅದಕ್ಕಿಂತಲೂ ನಮ್ಮ ಜೂನಿಯರ್ ಇಂಜಿನಿಯರುಗಳ ಸಂಬಳ ಸಾರಿಗೆ ಉತ್ತಮವಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ನಮ್ಮ ರಾಜ್ಯದಲ್ಲಿ ಮೆಡಿಕಲ್ ಗ್ರಾಜುಯೇಟ್ಸ್‌ಗೆ ಏನು ಸಾರಿಗೆಗಳನ್ನು ಇಟ್ಟಿದ್ದೀರೋ ಅದೇ ಸಂಬಳ ಸಾರಿಗೆಯನ್ನು ಇಂಜಿನಿಯರಿಂಗ್ ಗ್ರಾಜು

ಯೇಟ್ಸ್‌ಗೆ ಏಕೆ ಅನ್ಯಾಯ ಮಾಡಬಾರದು ? ಮೆಡಿಕರ್ ಗ್ರಾಜುಯೇಟ್ಸ್‌ಗೆ ಪ್ರೈವೇಟ್ ಪ್ರ್ಯಾಕ್ಟೀಸ್ ಮಾಡಿಕೊಳ್ಳುವುದಕ್ಕೆ ಬೇರೆ ಒಂದು ಅವಕಾಶ ಇದೆ. ಆದರೆ ಇಂಜನಿಯರಿಂಗ್ ಗ್ರಾಜುಯೇಟ್ಸ್‌ಗೆ ಪ್ರೈವೇಟ್ ಪ್ರ್ಯಾಕ್ಟೀಸ್‌ಗೆ ಯಾವ ಅವಕಾಶವೂ ಇಲ್ಲ. ಅಂಥಾದ್ದರಲ್ಲಿ ಇವರ ಸಂಬಳ ಸಾರಿಗೆ ಗಳನ್ನು ಏಕೆ ಈಕ್ವಲೈಸ್ ಮಾಡಲಲ್ಲ ?

ಶ್ರೀ ವೀರೇಂದ್ರ ಪಾಟೀಲ್.—ಸಂಬಳ ಸಾರಿಗೆಗಳನ್ನು ನಾವು ಪುನರ್ವಿಮರ್ಶೆ ಮಾಡುವ ಮುನ್ನ ಅವರು ಎಷ್ಟು ವರ್ಷಗಳಿಂದ ಓದುತ್ತಿದ್ದಾರೆ, ಅದಕ್ಕೆ ಏನು ಖರ್ಚಾಗುತ್ತದೆ, ಎಷ್ಟರಮಟ್ಟಿಗೆ ಅವರ ಬೇಡಿಕೆ ಇದೆ, ಸುತ್ತುಮುತ್ತಲಿರುವ ಪಕ್ಕದ ರಾಜ್ಯಗಳವರು ಏನು ಸಂಬಳ ಸಾರಿಗೆಗಳನ್ನು ಈ ದರ್ಜೆಯವರಿಗೆ ಕೊಡುತ್ತಿದ್ದಾರೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ನಿರ್ಣಯ ಮಾಡಿದ್ದೇವೆ. ಮದ್ರಾಸ್‌ನಲ್ಲ ಇಂತಹವರಿಗೆ ಏನು ಸಂಬಳ ಸಾರಿಗೆ ಇದೆಯೋ ಅದನ್ನೇ ಇಲ್ಲಿಯೂ ಒಪ್ಪಿಕೊಳ್ಳಬೇಕು ಎಂದು ಸರ್ವಸಾಮಾನ್ಯವಾಗಿ ಸರ್ಕಾರದ ನೀತಿಯಾಗಿದೆ. ಅದಕ್ಕೂ ಹೆಚ್ಚು ಸಂಬಳ ಜೂನಿಯರ್ ಇಂಜಿನಿಯರುಗಳಿಗೆ ಕೊಡಬೇಕು ಎಂದು ಒಂದು ದೊಡ್ಡ ಮನಸ್ಸು ಮಾಡಿ ಸರ್ಕಾರ ಈರೀತಿ ಮಾಡಿದೆ. ಆದ್ದರಿಂದ ನಾವು ಈಗ ಏನು ಅವರಿಗೆ ಸಂಬಳಸಾರಿಗೆಯನ್ನು ಕೊಟ್ಟಿದ್ದೇವೆಯೋ ಅದು ಸಂಪೂರ್ಣವಾಗಿ ಅವರಿಗೆ ಸಮಾಧಾನವಾಗಿರಬಹುದು ಎಂದು ನನಗನ್ನಿಸುತ್ತದೆ.

9-30 A.M.

ಮೆಡಿಕರ್ ಗ್ರಾಜುಯೇಟುಗಳಿಗೆ ಕೊಟ್ಟಹ್ಗೇ ಸಂಬಳ ಸಾರಿಗೆಗಳನ್ನು ಜೂನಿಯರ್ ಇಂಜಿನಿಯರುಗಳಿಗೂ ಕೊಡಬೇಕು ಎಂದರೆ ಮೆಡಿಕರ್ ಗ್ರಾಜುಯೇಟುಗಳ ಪೇ ಸ್ಕೇಲ್ ಮತ್ತು ಅಸಿಸ್ಟೆಂಟ್ ಇಂಜಿನಿಯರುಗಳ ಪೇ ಸ್ಕೇಲ್ ಎರಡೂ ಒಂದೇ ಆಗಿದೆ. ಎಂದರೆ 300 ರೂಪಾಯಿಗಳಿಂದ 700 ರೂಪಾಯಿಗಳವರೆಗೆ ಇದೆ. ಆದ್ದರಿಂದ ಜೂನಿಯರ್ ಇಂಜಿನಿಯರುಗಳಿಗೆ ಅಸಿಸ್ಟೆಂಟ್ ಇಂಜನಿಯರುಗಳ ಸಂಬಳವನ್ನು ಕೊಡಬೇಕಾಗುತ್ತದೆ, ಅಸಿಸ್ಟೆಂಟ್ ಇಂಜಿನಿಯರುಗಳಿಗೆ ಎಗ್ಜಿಕ್ಯೂಟೀವ್ ಇಂಜಿನಿಯರುಗಳ ಪೇ ಸ್ಕೇಲ್ಸ್ ಕೊಡಬೇಕಾಗುತ್ತದೆ, ಎಗ್ಜಿಕ್ಯೂಟೀವ್ ಇಂಜಿನಿಯರುಗಳಿಗೆ ಸೂಪರಿಂಟೆಂಡಿಂಗ್ ಇಂಜಿನಿಯರ ಪೇ ಸ್ಕೇಲ್ ಕೊಡಬೇಕಾಗುತ್ತದೆ. ಈ ರೀತಿ ಸಂಬಳವನ್ನು ಕೊಡುವುದಕ್ಕೆ ಸರ್ಕಾರದವರಿಗೆ ಶಕ್ತಿ ಇದೆಯೋ ಅಥವಾ ಇಲ್ಲವೋ ಎಂಬುದನ್ನೂ ಕೂಡ ನಾವು ನೋಡಬೇಕಾಗುತ್ತದೆ.

———

Conversion of Roads into State Fund Roads in Ron Taluk.

*Q.—46. **Sri A. J. DODDAMETI** (Ron).—

Will the Minister for Public Works be pleased to state :—

(*a*) whether they are aware of the longstanding demand for converting the following important roads in Ron Taluk, Dharwar District, into State Fund Roads, *viz.*,

(i) Rajura-Belura Road (15 miles) ;

(ii) Road from Ron to Malavada *via* Mudenagudi, Hulhura, Asuti, Karamudi (14 miles) ;

(*b*) if so, the action taken by Government in this behalf ?

A.—**Sri VEERENDRA PATIL** (Minister for Public Works).—

(*a*) Yes.

(*b*) The question of taking over these roads to Public Works Department is under consideration.